


## ‘ಹೆಲಿಕಾಪ್ಟರ್ ಹೂ’ವೆಂಬ ಇಂಜಿರ್ ಬಳ್ಳಿ

ಐದು ದಳದ ಚಿಕ್ಕದಾದ ಹೂವುಗಳು ದೊಡ್ಡದಾದ ಕ್ಲಸ್ಟರ್‌ಗಳಲ್ಲಿ ಕಾಣಿಸಿಕೊಳ್ಳುತ್ತವೆ. ಗಿಳಿ ಹಸುರು ಬಣ್ಣದ ಬೊಗಸೆ ರಾಶಿಯ ಹೂವುಗಳು ನೋಡುವುದಕ್ಕೆ ಬಹಳ ಆಕರ್ಷಕವಾಗಿರುತ್ತವೆ. ಹೂವುಗಳು ಆರಂಭದಲ್ಲಿ, ಹಸುರಿದ್ದು ನಂತರ ಕೆಂಪುಕಂದು ಬಣ್ಣಕ್ಕೆ ತಿರುಗುತ್ತವೆ. ಹಸುರು ಪರಿಸರದ ಬಣ್ಣ. ಸಾಮಾನ್ಯವಾಗಿ ಎಲೆ, ದಂಟು ಹಸುರಿನಿಂದ ಇದ್ದರೂ ಹಸುರಿನ ಹೂವು ಬಹಳ ಅಪರೂಪ. ಕುಪ್ಪಸಬಳ್ಳಿ, ಬಗುಳಿ ಬಳ್ಳಿ, ಹಂಜಾರಿಕೆ ಎಂಬ ಹೆಸರಿನ ಬಳ್ಳಿಗೆ ಗಿಳಿ ಹಸುರು ಎಲೆಗಳು. ಇವು ದಂಡಿಯಾಗಿ ಹೂವುಗಳನ್ನು ಬಿಡುತ್ತವೆ.

ಇಂಜಿರ್ ಬಳ್ಳಿ ಹೂವನ್ನು ಕೈಯಲ್ಲಿ ಹಿಡಿದು ಅದನ್ನು ಲಂಬ ಆಕಾರದಲ್ಲಿ ತಿರುಗಿಸಿ ನೆಲಕ್ಕೆ ಬಿಟ್ಟರೆ, ಬಹು ಆಕರ್ಷಕವಾಗಿ ಭ್ರಮಣೆಗೆ ಒಳಗಾಗುತ್ತಾ ನೆಲವನ್ನು ಸೇರುತ್ತದೆ. ಹೀಗಾಗಿಯೇ ಏನೋ ಇಂಜಿರ್ ಬಳ್ಳಿಯ ಹೂವಿಗೆ ಹೆಲಿಕಾಪ್ಟರ್ ಹೂವೆಂದೂ ಕೆಲವರು ಕರೆಯುತ್ತಾರೆ. ಕಾಡುತ್ಪತ್ತಿಯ ಅನ್ವೇಷಕರಿಗೆ ನೀರಡಿಕೆಯಾದಾಗ ಇವುಗಳ ಕಾಂಡವನ್ನು ಕತ್ತರಿಸಿ, ಅದು ಜಿನುಗಿಸಿದ ರಸವನ್ನು ಕುಡಿಯುತ್ತಾರಂತೆ. ಮರ ಸುತ್ತುತ್ತಾ ಮರವೇರಿ ಮರದ ಕೊರಡಿರಲಿ, ಹಸುರು ಕಾಂಡವಿರಲಿ, ಭೇದವಿರದೇ ದಂಡಿಯಾಗಿ ಹೂಮುಡಿಸುತ್ತವೆ. ಹೂವುಗಳು ಆಕಾರದಲ್ಲಿ ಮಲ್ಲಿಗೆಯಂತಿದ್ದರೂ, ಮುದುಡದೇ ಕೆಂಬಣ್ಣಕ್ಕೆ ತಿರುಗಿ ಪೇಪರಿನಂತೆ ಗಡಸಾಗುತ್ತವೆ. ಹಸುರ ಹೂವುಗಳು ಕ್ರಮೇಣ ಕಂದುಬಣ್ಣಕ್ಕೆ ತಿರುಗುತ್ತವೆ.

**–ವಿಶ್ವನಾಥ ಭಟ್, ಧಾರವಾಡ**



## ಮೇ ತಿಂಗಳ ವಿಸ್ಮಯದ ಹೂವು

ಮೇ ತಿಂಗಳಲ್ಲಿ ಅರಳುವ ಪುಷ್ಪಮಂಜರಿ ಹೂವು ವಿಸ್ಮಯದ ಆಗರ. ಮೇ ತಿಂಗಳಿನಲ್ಲಿ ಮಳೆ ಹಾಗೂ ಗುಡುಗು ಬಂದ ನಂತರ ಇದು ಕಾಣಿಸಿಕೊಳ್ಳುತ್ತದೆ. ಮೇ ತಿಂಗಳಲ್ಲಿ ಅರಳುವ ಕಾರಣ ಇದನ್ನು ‘ಮೇ ಫ್ಲವರ್’ ಎಂದೂ ಕರೆಯಲಾಗುತ್ತದೆ. ಭೂಮಿಯ ಒಳಗೆ ಹುದುಗಿಕೊಂಡಿರುವ ಈ ಗೆಡ್ಡೆಗಿಡ ಮೇ ತಿಂಗಳಿನಲ್ಲಿ ಹೂವು ಬಿಡುವ ಮೂಲಕ ಅಚ್ಚರಿಯನ್ನುಂಟು ಮಾಡುತ್ತದೆ. ಮೂಲತಃ ಪುಷ್ಪಮಂಜರಿ ಗಿಡ ಗೆಡ್ಡೆ ಸಸ್ಯ. ಮೇ ತಿಂಗಳು ಬಂದಾಗ 15 ಸೆಂಟಿ ಮೀಟರ್‌ನಷ್ಟು ಉದ್ದವಿರುವ ಎಲೆಗಳ ಪಕ್ಕದಿಂದ ಒಂದು ದಂಟು ಹೊರಡುತ್ತದೆ. ಬಳಿಕ ಇದರ ತುದಿಯಲ್ಲಿ ನೂರಾರು ಮೊಗ್ಗುಗಳು ಕಾಣಿಸಿಕೊಂಡು ನಿಧಾನವಾಗಿ ಅರಳಲು ಆರಂಭಗೊಳ್ಳುತ್ತದೆ. ಎರಡು ಮೂರು ದಿನಗಳಲ್ಲಿ ಇವುಗಳು ಪೂರ್ಣವಾಗಿ ಅರಳಿದಾಗ ಕೆಂಪು ಬಣ್ಣದ ಬೆಂಕಿ ಚೆಂಡಿನ ರೀತಿಯಲ್ಲಿ ವಿನ್ಯಾಸ ರೂಪುಗೊಳ್ಳುತ್ತದೆ.

ಈ ಹೂವಿನ ವಿನ್ಯಾಸದಿಂದಲೇ ಇದನ್ನು ‘ಫೈರ್ ಬಾಲ್ ಲಿಲ್ಲಿ’, ‘ಬ್ಲಡ್ ಲಿಲ್ಲಿ’ ಎಂದೂ ಕರೆಯಲಾಗುತ್ತದೆ. ಚಂಡಿನಾಕಾರದ ಈ ಕೆಂಪು ಹೂವಿನ ಕೊನೆಯಲ್ಲಿ ಹಳದಿ ಬಣ್ಣದ ಕೇಸರಗಳು ಇರುತ್ತವೆ. ಹತ್ತಿರದಿಂದ ನೋಡಿದಾಗ ಇದರ ವಿನ್ಯಾಸ ಅತ್ಯಂತ ಆಕರ್ಷಕವಾಗಿರುತ್ತದೆ. ಹೀಗೆ ಹೂವು ಅರಳಿದ ಮೇಲೆ 15ರಿಂದ 20 ದಿನ ಹಾಗೆಯೇ ಇರುತ್ತದೆ. ಬಳಿಕ ಹೂವಿನ ಗೊಂಚಲುಗಳು ಬಣ್ಣವನ್ನು ನಿಧಾನವಾಗಿ ಕಳೆದುಕೊಳ್ಳುತ್ತವೆ. ನಂತರ ಕಾಯಿ ರೂಪುಗೊಳ್ಳುತ್ತದೆ. ಆಮೇಲೆ ಅಲ್ಲಿ ಹೂವು ಅರಳಿತ್ತು ಎನ್ನುವುದಕ್ಕೆ ಪೂರಕವಾಗಿ ಎಲೆಗಳು ಮಾತ್ರ ಪಾರ್ಶ್ವ ಭಾಗದಲ್ಲಿ ಕಂಡುಬರುತ್ತವೆ. ಈ ಗಿಡ ‘ಅಮರಿಲ್ಲಿ ಡೇಸಿ’ ಎನ್ನುವ ಕುಟುಂಬಕ್ಕೆ ಸೇರಿದೆ. ಇದರಲ್ಲಿ ಸುಮಾರು 60ಕ್ಕೂ ವಿವಿಧ ತಳಿಗಳಿವೆ ಎಂದು ಸಸ್ಯಶಾಸ್ತ್ರಜ್ಞರು ಗುರುತಿಸಿದ್ದಾರೆ. ಈ ಗಿಡದ ಮೂಲ ಆಫ್ರಿಕಾ ಎಂದು ಗುರುತಿಸಲಾಗಿದೆ. ಈ ಗಿಡಗಳನ್ನು ಗೆಡ್ಡೆಗಳಿಂದ ಅಭಿವೃದ್ಧಿಪಡಿಸಬಹುದಾಗಿದೆ. ಪುಟ್ಟ ಮಕ್ಕಳು ಸೇರಿದಂತೆ ಪುಷ್ಪ ಆಸಕ್ತರು ಈ ಹೂವನ್ನು ಕಂಡು ಪ್ರಫುಲ್ಲರಾಗುತ್ತಾರೆ.

**–ಅರುಣ್ ಕಿಲ್ಲೂರು**

## ಮೈಲಿಗಲ್ಲಿನ ಮೆಲುಕು

ಒಂದೂರಿಂದ ಒಂದೂರಿಗೆ ಇರುವ ದೂರ ಅಳೆಯಲು ಈಗ ಕಿಲೋಮೀಟರ್ ಮಾಪನ ಘಟಕವನ್ನು ಬಳಸುವುದು ಸರ್ವೇಸಾಮಾನ್ಯ. ಆದರೆ ಬ್ರಿಟಿಷ್ ಕಾಲದ ಭಾರತದಲ್ಲಿ ಮೈಲು ಎಂಬ ಘಟಕ ಬಳಸುತ್ತಿದ್ದರು. ಅದೇ ಕಾರಣಕ್ಕೆ ಇಂದಿಗೂ ರಸ್ತೆ ಪಕ್ಕ ಕಾಣುವ ಕಿಲೋಮೀಟರ್ ಕಲ್ಲಿಗೂ ಮೈಲಿಗಲ್ಲು ಎಂದೇ ಸಂಭೋದಿಸಲಾಗುತ್ತದೆ. ವಾಹನಗಳ ಇಂಧನ ಕ್ಷಮತೆಯನ್ನು ಕೂಡ ಮೈಲೇಜ್ ಎಂಬ ಮಾಪನ ಘಟಕದಲ್ಲೇ ಅಳೆಯುವುದು. ಬ್ರಿಟಿಷ್ ಕಾಲದಿಂದಲೂ ರಾಜ್ಯದ ಪ್ರಮುಖ ಹೆದ್ದಾರಿ ಎಂದೇ ಗುರುತಿಸುವ ಬೆಂಗಳೂರು ಹೊನ್ನಾವರ ರಾಷ್ಟ್ರೀಯ ಹೆದ್ದಾರಿ 206 (ಹೊಸ ಹೆದ್ದಾರಿ ಸಂಖ್ಯೆ 69) ಸಾಗರದ ಮೂಲಕ ಹಾದುಹೋಗುತ್ತದೆ. ನಮ್ಮೂರಿನ ವಿವೇಕಾನಂದ ವೃತ್ತದಲ್ಲಿ (ಐತಪ್ಪನ ವೃತ್ತ) ಹಿಂದಿನ ಕಾಲದಲ್ಲಿ ನೆಟ್ಟ ಹಳೆಯ ಮೈಲಿಗಲ್ಲೊಂದು ‘ಬೆಂಗಳೂರು 216 ಮೈಲಿ’ ಎಂದು ಇಂದಿಗೂ ಸೂಚಿಸುತ್ತ ನಿಂತಿದೆ. ಬದಲಾದ ಸನ್ನಿವೇಶದಲ್ಲಿ ಈ ರಸ್ತೆಗೆ ಬೈಪಾಸ್ ರಸ್ತೆ ಮಾಡಿ ಈಗ ಇದು ಹಳೆ ಬಿಎಚ್ ರಸ್ತೆ ಅಥವಾ ಜೆಸಿ ರಸ್ತೆಯಾಗಿದೆ. ಈ ಮೈಲಿಗಲ್ಲು ಮಾತ್ರ ಹಳೆಯ ಹೆದ್ದಾರಿಯ ನೆನಪನ್ನು ಹೊತ್ತು ನಿಂತಿದೆ.

**–ಅಂಜನ್ ಕಾಯ್ಕಿಣಿ, ಸಾಗರ**

